ಓ.ಎಸ್. ನಂ. 72/2014

ಪಿ.ಡಬ್ಲ್ಯೂ: 01(ಬಸವರಾಜ)

ದಿನಾಂಕಃ 22.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ 1 ನೇ ಪ್ರತಿವಾದಿ ಪರ – ಶ್ರೀ KGK ವಕೀಲರಿಂದ.

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಹಾಗೂ ಬಟ್ಟೆ ವ್ಯಾಪಾರ ಮಾಡುತ್ತೇನೆ. ನನ್ನ ತಂದೆಯ ತಂದೆಯ ಹೆಸರು ಬಸಪ್ಪ. ಬಸಪ್ಪನವರಿಗೆ 6 ಜನ ಮಕ್ಕಳು. ಅದರ ಪೈಕಿ ಇಬ್ಬರು ಗಂಡು ಮಕ್ಕಳು. ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಇಬ್ಬರು ಗಂಡು ಮಕ್ಕಳಾಗಿರುತ್ತಾರೆ. ನನ್ನ ದೊಡ್ಡಪ್ಪನ ಹೆಸರು ಎಸ್ ಕೆ ರುದ್ರಣ್ಣ.

ಬಸಪ್ಪನವರಿಗೆ ಒಟ್ಟು ಎಷ್ಟು ಆಸ್ತಿ ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ದೊಡ್ಡಪ್ಪ ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆ ಹಾಗೂ ದೊಡ್ಡಪ್ಪನಿಗೆ ಒಟ್ಟಾರೆಯಾಗಿ ಎಷ್ಟು ಜಮೀನುಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ದೊಡ್ಡಪ್ಪ 1977 ರಲ್ಲಿ ವಿಭಾಗ ಮಾಡಿಕೊಂಡಿರಬಹುದು ದಿನಾಂಕ ನನಗೆ ನೆನಪಿಲ್ಲ. ಆ ಬಗ್ಗೆ ದಾಖಲಾತಿಯನ್ನು ನಾನು ನೋಡಿರುವುದಿಲ್ಲ.

ವಿಭಾಗದಲ್ಲಿ ಎಷ್ಟು ಆಸ್ತಿಗಳು ನನ್ನ ತಂದೆ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಅದರ ಬಗ್ಗೆ ದಾಖಲಾತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ವಿಭಾಗದ ಪತ್ರವನ್ನು ಹಾಜರುಪಸಿದ್ದರೇ ನನ್ನ ತಂದೆಗೆ ಯಾವ ಆಸ್ತಿಗಳು ಬಂದವು ಎಂದು ತಿಳಿದು ಬರುತ್ತಿತ್ತು ಎಂದರೆ ಹೌದು. ತಿಪ್ಪಣ್ಣನವರಿಗೆ 9 ಜನ ಮಕ್ಕಳು ಎಂದರೆ ಹೌದು. ವಂಶವೃಕ್ಷವನ್ನು ಯಾವ ಇಲಾಖೆಯಲ್ಲಿ ಪಡೆಯಬೇಕು ಎಂದು ನನಗೆ ಗೊತ್ತು ಎಂದರೆ ಗ್ರಾಮ ಲೆಕ್ಕಿಗರು ನೀಡುತ್ತಾರೆ.

ನಾನು ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ಕಂದಾಯ ಇಲಾಖೆಯವರು ನೀಡಿರುವುದಿಲ್ಲ. ನಾನು ಸಲ್ಲಿಸಿರುವ ವಂಶವೃಕ್ಷದಲ್ಲಿ ಎಸ್ ಕೆ ರುದ್ರಮುನಿಯವರು ಹೆಸರು ಇಲ್ಲ ಎಂದರೆ ಹೌದು. ನಾನು ಹಾಜರುಪಡಿಸಿರುವ ವಂಶವೃಕ್ಷದಲ್ಲಿ ಅವರ ಹೆಸರನ್ನು ಯಾವ ಕಾರಣಕ್ಕೆ ಹೊರತುಪಡಿಸಿದೆ ಎಂದು ಬರೆದಿಲ್ಲ.

ನನ್ನ ತಂದೆಯನ್ನು ಸಿದ್ದಯ್ಯನಕೋಟೆ ತಿಪ್ಪಣ್ಣ ಎಂದು ಕರೆಯುತ್ತಿದ್ದರು ಎಂದರೆ ಹೌದು. ಅವರು 1992-93 ರಲ್ಲಿ ಮೃತಪಟ್ಟಿರುತ್ತಾರೆ. ಅವರ ಜೀವಂತ ಕಾಲದಲ್ಲಿ ಅವರೇ ಮನೆ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ವಿಭಾಗವಾದ ನಂತರ ನಮ್ಮ ವ್ಯವಹಾರವನ್ನು ನಾವೇ ನೋಡಿಕೊಳ್ಳುತ್ತಿದ್ದೆವು. 3 ಜನ ಚಿಕ್ಕಮಕ್ಕಳ ಬಳಿ

ಅವರು ಇದ್ದರು. ಅವರೆಂದರೆ ಎಸ್ ಕೆ ಸಣ್ಣ ತಿಪ್ಪೇಸ್ವಾಮಿ, ಎಸ್ ಕೆ ಸಣ್ಣ ತಿಪ್ಪೇರುದ್ರಪ್ಪ, ಎಸ್ ಕೆ ಸಣ್ಣರುದ್ರಪ್ಪ. 1992 ರವರೆಗೆ ನನ್ನ ತಂದೆ ಅವರ ಬಳಿ ಇದ್ದರು ಎಂದು ತೋರಿಸಲು ಯಾವುದೇ ನನ್ನ ಬಳಿ ಇರುವುದಿಲ್ಲ.

ದಾವೆ ಹೂಡಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. 1981 ರಲ್ಲಿ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ತಿಳಿಸಿರುತ್ತೇವೆ ಎಂದರೆ ಹೌದು. 1981 ರಲ್ಲಿ ನನಗೆ 16 ವರ್ಷ ಇತ್ತು. ಸಾಕ್ಷಿ ಮುಂದುವರೆದು 21-22 ವರ್ಷ ವಯಸ್ಸಾಗಿತ್ತು. ನಾನಾ 1993-94 ರಲ್ಲಿ ಬಟ್ಟೆ ವ್ಯಾಪಾರ ಮಾಡಲು ಶುರು ಮಾಡಿರುತ್ತೇನೆ. 1981 ರಲ್ಲಿ ನನಗೆ ವಿವಾಹ ಆಗಿರಲಿಲ್ಲ. 1981 ರಲ್ಲಿ ಯಾವ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ನನಗೆ ಬಂತು ಎಂದು ನಾನು ದಾಖಲಾತಿಗಳನ್ನು ನೋಡಿ ಹೇಳಬೇಕಾಗುತ್ತದೆ. ನನ್ನ ಪ್ರಕಾರ 1981 ರಿಂದ ಕುಟುಂಬದಿಂದ ಪ್ರತ್ಯೇಕವಾಗಿ ಎಲ್ಲ ವ್ಯವಹಾರಗಳನ್ನು ನಾನೇ ಸ್ವಂತವಾಗಿ ಮಾಡಿಕೊಂಡು ಹೋಗುತ್ತಿದ್ದೆ. 1981 ರಿಂದ ನನಗೆ ಕಂದಾಯ ವ್ಯವಹಾರ ಹಾಗೂ ದಾಖಲಾತಿಗಳ ಬಗ್ಗೆ ಜ್ಞಾನ ಇದೆ ಎಂದರೆ ಕೆಲವೊಂದು ಗೊತ್ತಿದೆ, ಕೆಲವೊಂದು ಗೊತ್ತಿಲ್ಲ.

ನೊಂದಣಿಯಾದ ನಂತರ ನಮ್ಮ ಹೆಸರಿಗೆ ಖಾತೆ ಆಗಿ, ಕಂದಾಯ ಪಾವತಿ ಮಾಡಿಸಿಕೊಳ್ಳುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಪ್ರಕಾರ 1981 ರಲ್ಲಿ ವಿಭಾಗ ಆದಾಗ ನನಗೆ ಎಷ್ಟು ಆಸ್ತಿ ಬಂದಿದ್ದವು ಎಂದು ನಾನು ದಾಖಲಾತಿಗಳನ್ನು ನೋಡಿ ಹೇಳಬೇಕಾಗುತ್ತದೆ, ನನಗೆ ಗೊತ್ತಾಗುವುದಿಲ್ಲ. ದಾವೆ ಹೂಡುವ ಸಮಯದಲ್ಲಿ ದಾಖಲಾತಿಗಳನ್ನು ಪರಿಶೀಲಿಸಿ, ವಕೀಲರೊಂದಿಗೆ ಚರ್ಚಿಸಿ ದಾವೆಯನ್ನು ಹೂಡಿರುತ್ತೇವೆ. ಆ ಸಮಯದಲ್ಲಿ ನಾನು ಹೇಳಿರುವಂತಹ 1981 ರ ಪಾಲು ವಿಭಾಗ ಪತ್ರವನ್ನು ನೋಡಿರುತ್ತೇನೆ. ಅದರ ಮೂಲ ಪ್ರತಿ ನನ್ನ ಬಳಿ ಇದೆ. ಅದರಲ್ಲಿ 7-8 ಸ್ವತ್ತುಗಳು ನನಗೆ ನೀಡಲಾಗಿತ್ತು. ಅದರಲ್ಲಿ ಉಳಿದ ಸರ್ವೆ ನಂಬರುಗಳು, ಖಣ ಹಾಗೂ ಮನೆಗಳು ಇದ್ದವು.

1981 ರಲ್ಲಿ ನಮಗೆ ಬಂದ ಆಸ್ತಿಗಳ ಖಾತಾ ವರ್ಗಾವಣೆಯಾಗಿರುತ್ತದೆ. ಕಂದಾಯ ಇಲಾಖೆಯಲ್ಲಿ ವ್ಯವಸಾಯದ ಜಮೀನುಗಳಾಗಿದ್ದರೆ ಮ್ಯುಟೇಶನ್ ಆದೇಶದ ನಂತರ ಪಹಣಿಯಲ್ಲಿ ಹೆಸರು ಸೇರಿಸುತ್ತಾರೆ ಎಂದರೆ ಹೌದು. ಖಣ ಹಾಗೂ ಗ್ರಾಮ ಠಾಣಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತಿಯಲ್ಲಿ ಆದೇಶ ಮಾಡಿ ಖಾತಾ ಎಕ್ಸಟ್ರಾಕ್ಟನಲ್ಲಿ ಹೆಸರು ಸೇರಿಸುತ್ತಾರೆ ಎಂದರೆ ಹೌದು. 1981 ರಲ್ಲಿ ಆದ ಮ್ಯುಟೇಶನ್ ಆದೇಶ ಕಂದಾಯ ಇಲಾಖೆಯಲ್ಲಿ ಲಭ್ಯ ಇರುತ್ತದೆ ಎಂದರೆ ಹೌದು. ಸದರಿ ಮ್ಯುಟೇಶನ್ ಆದೇಶವನ್ನು ನಾನು ದಾವೆ ಸಲ್ಲಿಸುವ

ಸಮಯದಲ್ಲಿ ನಮ್ಮ ವಕೀಲರಿಗೆ ನೀಡಿರುತ್ತೇನೆ. ನ್ಯಾಯಾಲಯದ ಕಡತವನ್ನು ನೋಡುತ್ತಿದ್ದು ಅದರಲ್ಲಿ ಆದೇಶ ಪತ್ರ ಇಲ್ಲ.

ನಾನು ನ್ಯಾಯಾಲಯಕ್ಕೆ ನನ್ನ ಹೆಸರಿಗೆ ಖಾತಾ ವರ್ಗಾವಣೆಯಾದ ಆದೇಶ ಹಾಜರುಪಡಿಸಿರುವುದಿಲ್ಲ ಎಂದರೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಯಲ್ಲಿ 1981 ರ ಪಾಲು ವಿಭಾಗದ ಪತ್ರದ ಉಲ್ಲೇಖ ಇಲ್ಲ ಎಂದರೆ ಹೌದು.

ದಾವಾ ಆಸ್ತಿಯನ್ನು ಹೊರತುಪಡಿಸಿ, 1981 ರ ಪಾಲು ವಿಭಾಗ ಪತ್ರದಲ್ಲಿ ನನಗೆ ಬಂದ ಇತರ ಆಸ್ತಿಗಳು ನನ್ನ ಹೆಸರಿಗೆ ವರ್ಗಾವಣೆಯಾಗಿದೆ ಎಂಬುದರ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ದಾವಾ ಸ್ವತ್ತು ನನ್ನ ಹೆಸರಿಗೆ ವರ್ಗಾವಣೆಯಾಗದ ಕಾರಣ ಅದರ ದಾಖಲಾತಿಗಳನ್ನು ಮಾತ್ರ ಹಾಜರುಪಡಿಸಿರುತ್ತೇನೆ. ನನ್ನ ಹೆಸರಿಗೆ 1981 ರ ಪಾಲು ವಿಭಾಗ ಪತ್ರದನ್ವಯ ಯಾವ ದಿನಾಂಕದಂದು ಖಾತೆ ವರ್ಗಾವಣೆಯಾಗಿದೆ ಎಂದು ವಾದಪತ್ರದಲ್ಲಿ ಆಗಲೀ, ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿರುವುದಿಲ್ಲ ಎಂದರೆ ನಮೂದು ಮಾಡಿರುತ್ತೇನೆ.

1981 ರ ಪಾಲು ವಿಭಾಗ ಪತ್ರದ ಆಧಾರದ ಮೇರೆಗೆ ದಾವಾ ಆಸ್ತಿ ನನ್ನ ಹೆಸರಿಗೆ ಬಂದಿದ್ದರೆ ನಾನು ಕಂದಾಯವನ್ನು ನನ್ನ ಹೆಸರಿಗೆ ಪಾವತಿ ಮಾಡುತ್ತಿದ್ದೆ ಎಂದರೆ ಹೌದು. ನಾನು 1981 ರಿಂದ 2014 ರವರೆಗೆ ಕಂದಾಯ ಪಾವತಿ ಮಾಡಿದ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಹಳೆಯ ದಾಖಲಾತಿಗಳು ನನ್ನ ಬಳಿ ಇಲ್ಲ. ದಾವಾ ಆಸ್ತಿ ನನ್ನ ಹೆಸರಿಗೆ ಬಂದಿದ್ದು, ಅದಕ್ಕೆ ನಾನೇ ಮಾಲೀಕ ಎಂದು ನಾನು ಪ್ರತಿಪಾದಿಸುತ್ತಿದ್ದೇನೆ ಎಂದರೆ ಹೌದು. ನನ್ನ ಮಾಲೀಕತ್ವದ ಆಸ್ತಿಗೆ ನಾನು ಕಂದಾಯ ಪಾವತಿ ಮಾಡುತ್ತಾ ಬಂದಿದ್ದೇನೆ ಎಂದರೆ ಹೌದು. ದಾವಾ ಆಸ್ತಿ ನನ್ನ ಹೆಸರಿಗೆ ಬಂದಿದ್ದರೆ 2022-24 ರವರೆಗಿನ ಕಂದಾಯ ನಾನು ಪಾವತಿ ಮಾಡಿದ್ದೇನೆ ಎಂದರೆ 1 ನೇ ಪ್ರತಿವಾದಿ ಪಹಣಿ ಪತ್ರಿಕೆಗಳನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡ ಕಾರಣ ನನಗೆ ಕಂದಾಯ ಪಾವತಿ ಮಾಡುತ್ತಿಲ್ಲ. ಆ ರೀತಿ ಯಾವಾಗ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ತಿಳಿದು ಬಂದಿಲ್ಲ. ನನಗೆ ಸಾಕಷ್ಟು ವ್ಯವಹಾರಿಕ ಜ್ಞಾನ ಇದೆ ವಯಸ್ಸಿಗೆ ತಕ್ಕ ಜ್ಞಾನ ಇದೆ. ನನ್ನ ಮಾಲೀಕತ್ವದ ಆಸ್ತಿಗಳ ದಾಖಲಾತಿಗಳನ್ನು ನಾನು ಕಾಲ ಕಾಲಕ್ಕೆ ಪರಿಶೀಲನೆ ಮಾಡುತ್ತೇನೆ ಎಂದರೆ ಹೌದು. ಕಂದಾಯ ಪಾವತಿ ಮಾಡುವ ಸಮಯದಲ್ಲಿ ಆ ರೀತಿ ಪರಿಶೀಲನೆ ಮಾಡುತ್ತಿದ್ದೆ ಎಂದರೆ ಹೌದು. ಆ ರೀತಿ ಪರಿಶೀಲನೆ ಮಾಡಿದಾಗ ನನಗೆ ಆಸ್ತಿಗಳ ಆಗು ಹೋಗುಗಳ ಬಗ್ಗೆ ಗೊತ್ತಾಗುತ್ತಿತ್ತು ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ದಾವಾ

ಓ.ಎಸ್. ನಂ. 72/2014

ಪಿ.ಡಬ್ಲ್ಯು: 01(ಬಸವರಾಜ)

ಆಸ್ತಿಯ ಖಾತೆ ಮೊದಲ ಬಾರಿಗೆ ಯಾರ ಹೆಸರಿಗೆ ಆಗಿರುತ್ತದೆ ಎಂದರೆ 1981 ರಲ್ಲಿ ನನ್ನ ಹೆಸರಿಗೆ ಆಗಿರುತ್ತದೆ. ಅದಾದ ನಂತರ ಯಾರ ಹೆಸರಿಗೆ ಯಾವ ಇಸವಿಯಲ್ಲಿ ಆಗಿರುತ್ತದೆ ಎಂದರೆ ಅದನ್ನು ನಾನು ನೋಡಿರುವುದಿಲ್ಲ.

ನಮ್ಮ ಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ಹಾಗೂ ನಮ್ಮ ಕುಟುಂಬದವರ ಮದ್ಯ ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾವೆ ನಡೆದಿರುವುದಿಲ್ಲ. ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಸಲ್ಲಿಸುವಾಗ ಇತರ ದಾವೆಗಳ ಬಗ್ಗೆ ಉಲ್ಲೇಖ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆ ರೀತಿ ತಿಳಿದುಕೊಂಡಿದ್ದರೆ, ಪ್ರತಿವಾದಿಗಳು ಸಲ್ಲಿಸಿರುವ ಇತರ ದಾವೆಗಳ ಉಲ್ಲೇಖ ನನಗೆ ತಿಳಿದು ಬರುತ್ತಿತ್ತು ಎಂದರೆ ಹೌದು. ದಾವೆಯಲ್ಲಿ ತಿಳಿಸಿರುವ ವಿಳಾಸ ನನ್ನ ವಿಳಾಸವಾಗಿರುತ್ತದೆ ಎಂದರೆ ಹೌದು.

ನನ್ನ ಎಸ್ ಕೆ ಕರಿಬಸಪ್ಪ, ಎಸ್ ಕೆ ನಾಗರತ್ನ, ಎಸ್ ಕೆ ಭಾಗ್ಯಮ್ಮ, ಎಸ್ ಕೆ ಗೌರಮ್ಮರವರು ನನ್ನ ಅಣ್ಣನಾದ ತಿಪ್ಪೇರುದ್ರಪ್ಪನ ಮಕ್ಕಳಾಗಿರುತ್ತಾರೆ. ಸದರಿಯವರು 2013 ರಲ್ಲಿ ಓ ಎಸ್ 99/2013 ರಂತೆ ದಾವೆಯನ್ನು ದಾಖಲು ಮಾಡಿದ್ದರು ಎಂದರೆ ಹೌದು. ಸದರಿ ದಾವೆಯನ್ನು ನನ್ನ ಹಾಗೂ ಏರಿಸ್ವಾಮಿ, ತಿಪ್ಪೇರುದ್ರಪ್ಪರವರ ವಿರುದ್ಧ ಹೂಡಿರುತ್ತಾರೆ ಎಂದರೆ ಹೌದು. ಅದರಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಹೌದು. ಸದರಿ ದಾವೆಯನ್ನು ರಾಜಿಯ ಮೂಲಕ ಇತ್ಯರ್ಥ ಮಾಡಿಕೊಂಡಿರುತ್ತೇವೆ ಎಂದರೆ ಹೌದು. ಅದರಲ್ಲಿ ನಾವು ರಾಜಿ ಅರ್ಜಿ ಸಲ್ಲಿಸಿದ ಮೇರೆಗೆ ತೀರ್ಪು ಹಾಗೂ ಡಿಕ್ರಿಯಾಗಿರುತ್ತದೆ ಎಂದರೆ ಹೌದು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.